## ಕಲ್ಲಾದ ಗೋಧಿ ರಾಶಿ!

ರಾಯಚೂರು ಜಿಲ್ಲೆಯ ಲಿಂಗಸಗೂರಿನ ಮತ್ತು ಸಂತೆಕಲ್ಲೂರು ನಡುವೆ ಬರುವ ದೊಡ್ಡಹಳ್ಳದ ಹತ್ತಿರದ ಹೊಲದಲ್ಲಿ ಏಕಶಿಲೆಯ ದೊಡ್ಡ ಬಂಡೆಯೊಂದು ಕಾಣಿಸುತ್ತದೆ. ನೋಡುಗರಿಗೆ ಅದು ಕಣದ ರಾಶಿ ಹಾಗೆ ಕಾಣಿಸುತ್ತದೆ. ಆದರೆ ಈ ಕಲ್ಲಿನ ಹೊರತಾಗಿ ಸುತ್ತ ಒಂದೂ ಕಲ್ಲು ಕಾಣಸಿಗುವುದಿಲ್ಲ. ಇದರ ಕುರಿತು ಸ್ಥಳೀಯ ಜನಪದ ಕಥೆಯೊಂದು ತಳುಕು ಹಾಕಿಕೊಂಡಿದೆ.

ಅದೇನೆಂದರೆ ಕೊರವಂಜಿಯೊಬ್ಬಳು ವ್ಯಾಪಾರ ಮುಗಿಸಿಕೊಂಡು ತನ್ನ ಮಗುವಿನೊಂದಿಗೆ ಬಿರುಬಿಸಿಲಿನ ದಾರಿಯಲಿ ನಡೆದುಕೊಂಡು ಬರುತ್ತಿದ್ದಳು. ಹೀಗಿರುವಾಗ ತಾಯಿ, ಮಗುವಿಗೆ ವಿಪರೀತವಾದ ದಾಹವಾಗುತ್ತದೆ. ಸತ್ತಮುತ್ತ ಹಳ್ಳಕೊಳ್ಳ, ಕೆರೆ–ಕುಂಟೆ ಮತ್ತು ಯಾವ ಊರು ಸಹ ಇರುವುದಿಲ್ಲ. ಸುತ್ತಲೂ ಸೂಕ್ಷ್ಮವಾಗಿ ಗಮನಿಸಿದಾಗ ದೂರದ ಹೊಲವೊಂದರಲ್ಲಿ ರೈತರು ಧಾನ್ಯಗಳ ರಾಶಿ ಮಾಡುತ್ತಿರುವುದು ಕಂಡುಬರುತ್ತದೆ. ಅವರಲ್ಲಿ ನೀರು ಸಿಗುವುದೆಂಬ ನಿರೀಕ್ಷೆಯಿಂದ ಅವರತ್ತ ಹೆಜ್ಜೆ ಹಾಕುತ್ತಾಳೆ. ಗೋಧಿ ರಾಶಿ ಮಾಡುವುದನ್ನು ಕಾಣುತ್ತಾಳೆ. ನನಗೆ ಮತ್ತು ನನ್ನ ಈ ಮಗುವಿನಗೆ ತೀರಾ ಬಾಯಾರಿಕೆಯಾಗಿದೆ ಕೊಂಚ ನೀರು ಕೊಡ್ರಪ್ಪ ಎಂದು ಬೇಡುತ್ತಾಳೆ. ಅಯ್ಯೋ ನಮಗೆ ಕುಡಿಯಲು ನೀರಿಲ್ಲ. ಮನೆಯಿಂದ ತಂದ ನೀರು ನಮಗೆ ಸಾಲೋಲ್ಲ ಹೋಗಮ್ಮ ಎಂದು ಹೇಳಿ ಕಳಿಸುತ್ತಾರೆ. ಇದರಿಂದ ಕೋಪ ಮತ್ತು ಬೇಸರಗೊಂಡ ಕೊರವಂಜಿ ಇವರೆಲ್ಲರೂ ಕಲ್ಲಾಗಲಿ ಎಂದು ಶಪಿಸುತ್ತಾಳೆ. ಇದರಂತೆ ಗೋಧಿ ರಾಶಿಯೂ ಒಳಗೊಂಡು ಎಲ್ಲರು ಕಲ್ಲಾದರಂತೆ!

—ಈರಣ್ಣ ಬೆಂಗಾಲಿ, ರಾಯಚೂರು





## ಗೋಹಕ್ಕಿಯ ಬೇಟೆ

ಗೋಹಕ್ಕಿಯನ್ನು ವೈಜ್ಞಾನಿಕವಾಗಿ ಬುಬುಲ್ಕಸ್ ಐಬಿಸ್ ಎಂದು ಕರೆಯುವರು. ಹಳದಿ ಕೊಕ್ಕು, ಕಪ್ಪು ಕಾಲು, ಪಾದಗಳಿವೆ. ಇವುಗಳ ಆಯುಷ್ಯ 6–7 ವರ್ಷ. ಹೆಣ್ಣು ಗಂಡನ್ನು ಗುರುತಿಸುವುದು ಕಷ್ಟ. ಆದರೆ ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಗೋಹಕ್ಕಿಯ ತಲೆ, ಬೆನ್ನಿನ ಭಾಗವು ಕಿತ್ತಳೆ ಬಣ್ಣಕ್ಕೆ ತಿರುಗುತ್ತದೆ.

ಈ ಬೆಳ್ಳಕ್ಕಿಗಳು ಕೆರೆ, ಹೊಂಡ, ಹಳ್ಳ–ಕೊಳ್ಳಗಳಲ್ಲಿ ಸಾಮಾಜಿಕ ಬದುಕು ನಡೆಸುತ್ತವೆ. ಜುಲೈ–ಸೆಪ್ಟಂಬರ ಅವಧಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ಗುಂಪಿನಲ್ಲಿ ಗೂಡು ಕಟ್ಟುತ್ತವೆ. ಹೆಣ್ಣು 3–4 ನೀಲಿ ಬಣ್ಣದ ಮೊಟ್ಟೆಗಳನ್ನಿಡುವುದು. ಗೋಹಕ್ಕಿಯು ಆಹಾರ ಭಕ್ಷಣೆಗಾಗಿ ಹೋರಾಡುವ ವಿವಿಧ ಹಂತಗಳನ್ನು ಅತ್ತಿತ್ತ ಅಡ್ಡಾಡುತ್ತ ಜೊತೆಗಿದ್ದ ಆಕಾಶ ಫೋಟೊ ಕ್ಲಿಕ್ಕಿಸಿಕೊಂಡಿದ್ದ. ಪ್ರತಿದಿನ ಸಜೀವಿಗಳು ಆಹಾರಕ್ಕಾಗಿ ಹೋರಾಡುತ್ತಲೇ ಇರುತ್ತವೆ. ಹೋರಾಟವಿದ್ದರೇ ಬದುಕಿಗೆ ಅರ್ಥ ಅಲ್ಲವೇ?

—ಪ್ರಕಾಶ ಎಸ್. ಮನ್ನಂಗಿ

## ಸಾಲುನಟ್ಟಿ ಸಂಭ್ರಮ

ಮಳೆಗಾಲ ಬಂತೆಂದರೆ ಕೃಷಿ ಚಟುವಟಿಕೆಗಳು ಗರಿಕೆದರುತ್ತವೆ. ಹಿಂದೆ ಭತ್ತದ ಸಸಿಗಳನ್ನು ನಾಟಿ ಮಾಡುವ ವಿಧಾನ ಸಾಂಪ್ರದಾಯಿಕವಾಗಿತ್ತು. ಈಗಿನ ಕೆಲವೊಂದು ತಳಿಗಳಿಗೆ ಸಾಲುನಟ್ಟಿಯೇ ಆಗಬೇಕು. ಸುಮಾರು 2025 ದಿನಗಳ ಎಳೆಯ ಭತ್ತದ ಸಸಿಗಳನ್ನು ಕ್ರಮಬದ್ಧವಾಗಿ, ನಿರ್ದಿಷ್ಟ ಅಂತರದಲ್ಲಿ ಸಾಲಾಗಿ ನೆಡುವ ರೀತಿಯೇ 'ಸಾಲುನಟ್ಟಿ'.

ಉತ್ತು ಹದವಾದ ಗದ್ದೆಯ ಆ ಬದಿ ಮತ್ತು ಈ ಬದಿಯಲ್ಲಿ ಇಬ್ಬರು ಹಗ್ಗವನ್ನು ಗದ್ದೆಯಲ್ಲಿ ಎಳೆದು ಹಿಡಿದಿರುತ್ತಾರೆ. ಹಗ್ಗದ ಉದ್ದಕ್ಕೂ ಒಂಬತ್ತು ಇಂಚುಗಳ ಅಂತರದಲ್ಲಿ ನಾಟಿ ಮಾಡಲು ಅನುಕೂಲವಾಗುವಂತೆ ಅಂಟಿನ ಟೇಪನ್ನು ಸುತ್ತಿರುತ್ತಾರೆ. ಸಾಲುಗಳ ನಡುವಿನ ಅಂತರವೂ ಒಂಬತ್ತು ಇಂಚು ಇರುವಂತೆ ನಾಟಿ ಮಾಡಲಾಗುತ್ತದೆ. ನಾಟಿ ಮಾಡುವವರು ಹಗ್ಗದ ಬದಿಯ ಒಂದೇ ಸಾಲಿನಲ್ಲಿದ್ದು ಸಸಿಗಳನ್ನು ನೆಡುತ್ತಾರೆ. ಗದ್ದೆಯ ಬದುವಿನಲ್ಲಿ ನಿಂತರೆ ನಟ್ಟಿಯ ಕ್ರಮಬದ್ಧ ಸಾಲು ಕಣ್ಸೆಳೆಯುತ್ತದೆ. ಈ ಸಲ ಊರಿಗೆ ಹೋದಾಗ ಕಂಡ ಇಂತಹ ಸಂಭ್ರಮವನ್ನು ಸೆರೆಹಿಡಿಯಲಾಯಿತು.

—ಧರ್ಮಾನಂದ ಶಿರ್ವ

